**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ**

**ಸಿ.ಸಿ ಸಂಖ್ಯೆ.*ನಂ.478/2025***

**ಫಿರ್ಯಾಧಿದಾರಃ** ಸರಕಾರದ ಪರವಾಗಿ ರಟಕಲ ಪೋಲಿಸ ಠಾಣೆ

// ವಿರುದ್ಧ //

**ಆರೋಪಿತರು :** ನೂರ್ ಸಿಂಗ ಮತ್ತು ಇತರರು

ಆ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಈ ಕೆಳಕೆಂಡ ಆರೋಪಿತರು.

| | |
|---|---|
| 1. | ನೂರ್ ಸಿಂಗ ತಂದೆ ಕಾನು ರಾಠೋಡ. |
| 2. | ಕಾನು ತಂದೆ ಲಚ್ಚು ರಾಠೋಡ. |
| 3. | ಪ್ರಕಾಶ ತಂದೆ ಕಾನು ರಾಠೋಡ. |
| 4. | ರಮಿತಾ ಗಂಡ ನೂರ ಸಿಂಗ ರಾಠೋಡ. |
| 5. | ಲಕ್ಷ್ಮೀ ಬಾಯಿ ಗಂಡ ಪ್ರಕಾಶ ರಾಠೋಡ. |
| 6. | ಪ್ರೇಮ ತಂದೆ ಪ್ರಕಾಶ ರಾಠೋಡ. |
| 7 | ಸಚೀನ ತಂದೆ ನರಸಿಂಗ ರಾಠೋಡ |
| 8 | ಅಂಜನಾಬಾಯಿ ಗಂಡ ಪ್ರೇಮ ರಾಠೋಡ |
| 9 | ಸೀತಾ ಬಾಯಿ ಗಂಡ ಶಂಕರ ರಾಠೋಡ |
| 10 | ಜಗನ್ನಾಥ ತಂದ ಶಂಕರ ರಾಠೋಡ |
| 11 | ರಾಮು ತಂದೆ ಲಚ್ಚು ರಾಠೋಡ |
| 12 | ಲಕ್ಷ್ಮಣ ತಂದೆ ವಾಲು ರಾಠೋಡ |

**ಆದ ನಿಮ್ಮ ವಿರುದ್ಧ ದೋಷಿಸುವ ಆರೋಪಣೆ ಎನೆಂದರೆ,**

ದಿನಾಂಕಃ 20-06-2023 ರಂದು ಸಾಯಂಕಾಲ 05-30 ಪಿ.ಎಂ ಸುಮಾರಿಗೆ ರಟಕಲ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಸೇರಿಬಡಾ ತಾಂಡಾದಲ್ಲಿ ಚಾಸಾ-1 ರಮೇಶ ನೇದ್ದವನು ಎಂದಿನಂತ ದನಕರುಗಳನ್ನು ಕಟ್ಟುವಾಗ ಆರೋಪಿತರೆಲ್ಲರೂ ಹೊಡೆಯುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿ ನೀವು ಚಾಸಾ-1 ನೇದ್ದವರಿಗೆ ಹೊಡೆಯುವ ಏಕೋದ್ದೇಶದಿಂದ ಬಂದು ಸದರಿ ಅಕ್ರಮ ಕೂಟದ ಸದಸ್ಯರಾಗಿದ್ದರಿಂದ ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರೆಲ್ಲರೂ ಚಾಸಾ-1 ನೇದ್ದವರಿಗೆ ನೀ ಯಾಕ ಬಂದಿದ್ದಿ ಬೋಸಡಿ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-1 ನೇದ್ದವನಿಗೆ ಬಡಿಗೆಯಿಂದ ಹೊಡೆದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ 149 ರಡಿಯಲ್ಲಿ

ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 6ನೇ ಆರೋಪಿ ನೀನು ಚಾಸಾ-1 ನೇದ್ದವನಿಗೆ ಕಲ್ಲಿನಿಂದ ತಲೆಯ ಮೇಲೆ ಜೋರಾಗಿ ಹೊಡೆದು ರಕ್ತಗಾಯವನ್ನುಂಟು ಮಾಡಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 324 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

6. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರಾದ ನೀವು ಚಾಸಾ-1 ನೇದ್ದವರಿಗೆ ಕೈ ಕಾಲು ಮುರಿದು ಖಲಾಸ ಮಾಡ್ರಿ ಅಂತಾ ಜೀವ ಬೆದರಿಕೆ ಹಾಕಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 12.09.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
C/c ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.